ಬಲದಿಂದ ಎಡಕ್ಕೆ ದೃಷ್ಟಿ ಹೊರಳಿಸಿದಳು, ಹಕ್ಕಿಯೊಂದು ಒಂಟಿಯಾಗಿ ಕುಳಿತಿರುವುದನ್ನು ನೋಡಿ ರಿಯಾ ಉದಾಸೀನಳಾದಳು. ಹಕ್ಕಿಗಳು ಹಾರಾಟ ತೇಲಾಟ ನಡೆಸಿದ್ರೆ ಅವಳ ದೇಹ ಮನಸ್ಸು ಎರಡೂ ಉಲ್ಲಸಿತವಾಗುತ್ತೆ. ಆಗ ಅವಳು ಕೈಚಾಚಿ ಎದುರಿಗಿರುವ ಬೇವಿನ ಮರದ ರೆಂಬೆ ಹಿಡಿಯಲು ಪ್ರಯತ್ನಿಸುತ್ತಾಳೆ. ಬೇವಿನ ಮರದ ಪಕ್ಕದಲ್ಲೇ ಇರೋ ನುಗ್ಗೇಮರದ ತುಂಬಾ ಕಂಬಳಿಹುಳ. ಕೆಲವು ಸಲ ಗೋಡೆ ಮೇಲೆ ಹರಿದುಕೊಂಡು ಮನೆಯೊಳಗೆ ಬಂದುಬಿಡ್ತವೆ. ಆ ಕಂಬಳಿಹುಳ ಕಂಡ್ರೆ ರಿಯಾಗೆ ಬಹಳ ಭಯ. ಬರೀ ಕಂಬಳಿಹುಳ ಅಲ್ಲ! ಹಲ್ಲಿ, ಓತಿಕ್ಯಾತ, ಜಿರಲೆ, ಕಪ್ಪೆ, ಸಾವಿರಕಾಲು ಏನೇ ಕಂಡರೂ ಅವಳಿಗೆ ಭಯ. ಆದರೆ, ಪತಂಗ ಹಾರಿ ಬಂದು ಮೈ ಮೇಲೆ ಕೂತರೆ ಸಾಕು, ಏನೋ ಒಂಥರಾ ಬದಲಾಗಿಬಿಡುತ್ತಾಳೆ, ಒಂದು ಬಗೆಯ ಮಧುರ ಸುಖ ಅನುಭವಿಸುತ್ತಾಳೆ. ಒಂಥರಾ ರೋಮಾಂಚನ ಕೂಡ.

ಮದುವೆಯಾಗುವಾಗ ಕರೆಯೋಲೆಯಲ್ಲಿ ಒಂದು ದೊಡ್ಡ ಪತಂಗದ ಚಿತ್ರವಿರಬೇಕೆಂಬುದು ಅವಳು ಬಯಸಿದ ಒಂದೇ ಒಂದು ಬಯಕೆಯಾಗಿತ್ತು. ಆ ವಿಚಾರವನ್ನು ಮಾ ಬಾಬಾ (ಅಮ್ಮ ಅಪ್ಪ) ರಿಗೆ ನೇರವಾಗಿ ಹೇಳಲು ನಾಚಿಕೆಯಾಗಿ ದಾದಾ ಬೌದಿಗೆ (ಅಣ್ಣ ಅತ್ತಿಗೆ) ಹೇಳಿದ್ದಳು, ಅವರು ಮಾ ಬಾಬಾ ಅವರ ಜೊತೆ ಮಾತಾಡಿ ನಿಜವಾಗಿಯೂ, ಬಹಳ ಹಣ ಖರ್ಚು ಮಾಡಿ ಸುಂದರವಾದ ಒಂದು ಪತಂಗದ ಚಿತ್ರವನ್ನು ಆಮಂತ್ರಣ ಪತ್ರದಲ್ಲಿ ಮುದ್ರಿಸಿದ್ದರು. ನೆನೆಸಿಕೊಂಡರೆ ಅವಳಿಗೆ ಈಗಲೂ ನಾಚಿಕೆಯಾಗುತ್ತೆ.

ಅಷ್ಟೊತ್ತಿಗೆ ಕೇಳಿಸಿದ ರಿಕ್ಷಾ ಗಂಟೆಯಿಂದ ಅವಳ ಆಲೋಚನೆಗೆ ತಡೆಯುಂಟಾಯಿತು. ಓ! ನೆನಪಾಯಿತು, ಇವತ್ತು ಕೆಳಗಿನ ಮನೆ ಮಾಧವಿದಿ (ಮಾಧವಿಯಕ್ಕ) ಕಾಶಿಗೆ ಹೋಗ್ತಾಯಿರೋದು. ಒಂದು ಸಲ ಕೆಳಗೆ ಹೋಗಿ ಅವರ ಜೊತೆ ಮಾತಾಡಬೇಕು ಅಂತ ಕೂಡ ಅಂದುಕೊಂಡಳು. ಬೆಳಿಗ್ಗೆ ಮಾಧವಿದಿನೇ ಬಂದಿದ್ದರು ನೋಡೋಕೆ, ಕಾಶಿಗೆ ಹೋಗಬೇಕು ಅನ್ನೋ ನೋವಲ್ಲಿ ಬಹಳ ಖಿನ್ನರಾಗಿದ್ದರು. ರಿಯಾಳನ್ನು ತಬ್ಬಿಕೊಂಡು ಅಳುತ್ತಾಯಿದ್ದರು. ಕೆಳಗೆ ಹೋಗಿ ಅವರನ್ನು ನೋಡಬೇಕು ಅನ್ನೋ ಆಸೆ ನಿಧಾನವಾಗಿ ಇಳೀತು; ಜಯಾದಿ (ಜಯಕ್ಕ) ಮತ್ತು ಸುದೀಪ್ತದಾ (ಸುದೀಪ್ತಣ್ಣ) ರನ್ನು ಮುಖಾಮುಖಿಯಾಗಲು ಅವಳಿಗಿಷ್ಟವಿರಲಿಲ್ಲ.

ರಿಯಾ ಮನದಲ್ಲೇ ಪ್ರಾರ್ಥಿಸ್ತಾಯಿದ್ದಳು 'ಆ ರಿಕ್ಷಾ ಹಾಗೆ ಖಾಲಿ ಹಿಂದಿರುಗಿ ಹೋಗಲಿ' ಅಂತ. ಯಾವುದಾದರೂ ಕಾರಣದಿಂದ ಮಾಧವಿದಿ ಕಾಶಿಗೆ ವಾಪಸು ಹೋಗದಂಗಾಗಲಿ. ಮಾಧವಿದಿಗಾಗಿ ಅವಳ ಮನ ಮರುಗಿತು, ನೊಂದುಕೊಂಡಿತು.

* * *

ಆದರೆ, ಎಂಟು ವರ್ಷಗಳ ಹಿಂದೆ ಮೊದಲ ಸಲ ಮಾಧವಿದಿನಾ ನೋಡಿದಾಗ ರಿಯಾಗೆ ಬಹಳ ಆಶ್ಚರ್ಯವಾಗಿತ್ತು. ಆ ದಿನ ಸ್ನಾನ ಮುಗಿಸಿ ಮಧ್ಯಾಹ್ನದ ಹೊತ್ತಿಗೆ ಕೂದಲನ್ನು ಒಣಗಿಸಲು ಈ ಬಾಲ್ಕನಿಯಲ್ಲಿ ಬಂದು ನಿಂತಿದ್ದಳು ರಿಯಾ. ದಿಢೀರನೆ ದಪದಪ ಜೋರು ಹೆಜ್ಜೆ ಸಪ್ಪಳ, ಬಾಲ್ಕನಿಯ ಬಲಗಡೆಯಿರುವ ಗ್ರಿಲ್ ಬಾಗಿಲಿನ ಇನ್ನೊಂದು ಕಡೆಯಿಂದ. ಆ ಕಡೆ ತಿರುಗಿದಾಗ ಒಬ್ಬ ಎತ್ತರದ, ನಡು ವಯಸ್ಸು ದಾಟಿದ ವ್ಯಕ್ತಿಯೊಬ್ಬರು ಮೆಟ್ಟಿಲು ಹತ್ತಿ ಮೂರನೇ ಮಹಡಿಗೆ ಹೋಗ್ತಾಯಿದ್ದದ್ದನ್ನ ನೋಡಿದಳು. ಅವರು ಬಿಳಿ ಬಟ್ಟೆಯನ್ನು ಲುಂಗಿ ತರ ಸುತ್ತಿ ಕಟ್ಟಿಕೊಂಡಿದ್ದರು. ಮೈಮೇಲೆ ಬಿಳಿ ಉತ್ತರೀಯ. ಉತ್ತರೀಯದೊಳಗಿಂದ ಅಂಗಿ ಕಾಣಿಸ್ತಾಯಿರಲಿಲ್ಲ. ತಲೆ ಬೋಳಿಸಿತ್ತು, ಮೂಗಿನಿಂದ ಹಿಡಿದು ಹಣೆಯುದ್ದಕ್ಕೂ ನಾಮ ಮುದ್ರೆಯಿದ್ದ ಮುಖದಲ್ಲಿ ಕಾಠಿಣ್ಯವಿತ್ತು. ಕೈಗಳೆರಡರ ಮೇಲೂ ಅದೇ ತರ ತಿಲಕವಿತ್ತು. ಅವರು ಒದ್ದೆ ಬಟ್ಟೆಗಳನ್ನು ತಗೊಂಡು ಮೆಟ್ಟಿಲು ಹತ್ತಿ ಮಹಡಿ ಮೇಲೆ ಹೋದರು. ಅವಳಿಗಾದ ಆಶ್ಚರ್ಯದಿಂದ ಹೊರಬರಲು ರಿಯಾಗೆ ಸ್ವಲ್ಪ ಸಮಯವೇ ಹಿಡಿಯಿತು. ಈ ವ್ಯಕ್ತಿ ಕೆಳಗಿನ ಬಾಡಿಗೆ ಮನೆಯವರಲ್ಲಿ ಯಾರೋ ಒಬ್ಬರಿರಬೇಕು ಅಂದುಕೊಂಡಳು.

ಆ ದಿನ ಸಂಜೆ ರಿಯಾ ಮಹಡಿ ಮೇಲೆ ಹೂ ಗಿಡಗಳಿಗೆ ನೀರು ಹಾಕಲು ಹೋದಾಗ ಕೆಳಗಿನ ಮನೆಯ ಜಯಾದಿ ಒಣಗಿದ ಬಟ್ಟೆ ಎತ್ಕೊಳೊಕೆ ಮೇಲೆ ಬಂದರು. ರಿಯಾ ಕುತೂಹಲ ತಡೆಯಲಾರದೆ ಮಧ್ಯಾಹ್ನ ನೋಡಿದ ವ್ಯಕ್ತಿಯ ಬಗ್ಗೆ ಜಯಾದಿಯನ್ನು ಕೇಳಿದಾಗ 'ಅವರು ಮಾಧವಿಲತಾ, ಸುದೀಪ್ತದಾನ ಒಬ್ಬಳೇ ಅಕ್ಕ, ಕಾಶಿಯಿಂದ ಆ ದಿನಾನೇ ಬಂದಿದಾರೆ. ಬಾಲವಿಧವೆ' ಎಂಬುದು ಗೊತ್ತಾಯಿತು. ರಿಯಾ ಅವಾಕ್ಕಾದಳು. ಅವರು ಒಬ್ಬ ಮಹಿಳೆ!

